ದಿನಾಂಕಃ 03-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ,

1) ನಾನು ಕ್ಷೌರಿಕ ಕೆಲಸ ಮಾಡುತ್ತೇನೆ. ನಾನು ಬಾಡಿಗೆ ಅಂಗಡಿಯಲ್ಲಿ ಕ್ಷೌರಿಕ ಕೆಲಸ ಮಾಡುತ್ತೇನೆ. ಸದರಿ ಅಂಗಡಿಯನ್ನು ಪಂಚಾಯತಿ ರವರು ನೀಡಿರುತ್ತಾರೆ. ಪ್ರತಿ ತಿಂಗಳು ತೆರಿಗೆ ರೂಪದಲ್ಲಿ ರೂ. 250/- ಪಾವತಿ ಮಾಡುತ್ತೇನೆ. ಪಂಚಾಯತಿಯಿಂದ ನಿರ್ಗತಿಕರಿಗೆ ಅಂಗಡಿಯನ್ನು ನೀಡುತ್ತಾರೆ ಎಂದರೆ ಸರಿ. ನನಗೆ ಬಿ ಪಿ ಎಲ್ ಪಡಿತರ ಚೀಟಿ ಇರುತ್ತದೆ. ಬಡತನ ರೇಖೆಗಿಂತ ಕೆಳಗಿನ ಜನರಿಗೆ ಬಿ ಪಿ ಎಲ್ ಪಡಿತರ ಚೀಟಿ ನೀಡುತ್ತಾರೆ ಎಂದರೆ ಸರಿ.

2) ನಾಗಶೆಟ್ಟಿ ರವರು ಪರಿಚಯ ಇರುತ್ತಾರೆ. ಕ್ಷೌರಿಕ ಕೆಲಸದಿಂದ ಪ್ರತಿ ದಿನ ನನಗೆ ರೂ. 500 ರಿಂದ 600 ಆದಾಯ ಇರುತ್ತದೆ. ನಮ್ಮ ಮನೆಯಲ್ಲಿ ಮೂರು ಜನ ವಾಸವಾಗಿರುತ್ತೇವೆ. ಪ್ರತಿದಿನ ಒಬ್ಬ ಮನುಷ್ಯನಿಗೆ ರೂ. 200/- ಖರ್ಚು ಬರುತ್ತದೆ ಎಂದರೆ ಸರಿ. ನನ್ನ ಮಗ ಸಹ ನನ್ನ ಜೊತೆ ಕೆಲಸ ಮಾಡುತ್ತಾನೆ ಎಂದರೆ ಸರಿ. ನನಗೆ ವ್ಯವಹಾರ ಜಮೀನು ಇರುವುದಿಲ್ಲ.

3) ಆರೋಪಿ ಸಾಲ ಕೇಳಲು ನನ್ನನ್ನು ಬೇಟಿ ಮಾಡಿರುತ್ತಾರೆ. ನಾನು ಆರೋಪಿಗೆ ಹೊರತುಪಡಿಸಿ ಬೇರೆಯವರಿಗೆ ಸಾಲವನ್ನು ನೀಡಿರುವುದಿಲ್ಲ. ನನ್ನ ಬಳಿ ಹಣ ಇರಲಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ-3 ರಲ್ಲಿ 0-9-2023 ಎಂದು ನಮೂದು ಆಗಿರುತ್ತದೆ ಎಂದರೆ ಸರಿ. ನಿಶಾನೆ ಪಿ-1 ಚೆಕ್ಕನ್ನು ಆರೋಪಿಯೇ ಬರೆಸಿಕೊಂಡು ಬಂದಿರುತ್ತಾರೆ. ನಿಶಾನೆ ಪಿ-1 ಚೆಕ್ಕಿನಲ್ಲಿ ಅಕ್ಷರಗಳಲ್ಲಿ ಮೊತ್ತವನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ-1 ಚೆಕ್ಕನ್ನು ನಾನೇ ಬರೆದಿರುತ್ತೇನೆ ಎಂದರೆ ಸರಿಯಲ್ಲ.

4) ನಿಶಾನೆ ಪಿ-1 ಚೆಕ್ಕನ್ನು ಆರೋಪಿ ಯಾವ ದಿನಾಂಕದಂದು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಪುನಃ ನುಡಿಯುತ್ತಾರೆ ನಿಶಾನೆ ಪಿ-1 ಚೆಕ್ಕನ್ನು 09.09.2022 ರಂದು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಿಶಾನೆ ಪಿ-1 ಚೆಕ್ಕಿನಲ್ಲಿ ಆರೋಪಿ ಸಹಿ ಮಾಡಿರುತ್ತಾರೆ. ಆರೋಪಿ ನಿಶಾನೆ ಪಿ-1 ಚೆಕ್ಕಿನಲ್ಲಿ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ-1 ಚೆಕ್ಕಿನಲ್ಲಿ ದಿನಾಂಕ 13.12.2022 ಎಂದು ನಮೂದು ಮಾಡಿರುತ್ತಾರೆ. ಬ್ಯಾಂಕಿನವರೊಂದಿಗೆ ಶಾಮಿಲಾಗಿ ನಾನು ಈ ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಶಾನೆ ಪಿ-2 ಹಿಂಬಹರವನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ